ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 96-102
©*IIMRD*, Mysuru
IIMRD JOURNALS
www.iimrd.com

# ತುಮಕೂರು ಜಿಲ್ಲೆಯ ಶಾಸನೋಕ್ತ ಗಾವುಂಡರ ಉಗಮ ಮತ್ತು ವಿಕಾಸ: ಚಾರಿತ್ರಿಕ ವಿಶ್ಲೇಷಣೆ

**ಜಗನ್ನಾಥ. ಬಿ. ಈ[1] ಮತ್ತು ಡಾ. ಚಂದ್ರಕಾಂತ ಕೋಳಿಗುಡ್ಡೆ[2]**

[1]ಸಹ ಪ್ರಾಧ್ಯಾಪಕರು ಮತ್ತು ಸಂಶೋಧಕರು, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

[2]ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಫ.ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರ, ತೊರವಿ ಬಿಜಾಪುರ

**ಸಾರಾಂಶ: (Abstract)**

*ಈ ಅಧ್ಯಯನವು ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಗಾವುಂಡರ ಉಗಮ, ಬೆಳವಣಿಗೆ ಮತ್ತು ಸಾಮಾಜಿಕ–ಆರ್ಥಿಕ ಪಾತ್ರವನ್ನು ಚಾರಿತ್ರಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಪ್ರಾಚೀನ ಮತ್ತು ಮಧ್ಯಕಾಲೀನ ಶಾಸನಗಳಲ್ಲಿ ಕಂಡುಬರುವ ಗಾವುಂಡರ ಕುರಿತ ಮಾಹಿತಿಯನ್ನು ಆಧರಿಸಿ ಅವರ ಸಾಮಾಜಿಕ ಸ್ಥಾನಮಾನ, ಅಧಿಕಾರ ಮತ್ತು ಕರ್ತವ್ಯಗಳನ್ನು ಅಧ್ಯಯನ ಮಾಡಲಾಗಿದೆ. ಗಾವುಂಡರು ಗ್ರಾಮೀಣ ಆಡಳಿತ, ಕೃಷಿ ವ್ಯವಸ್ಥೆ, ಭೂಮಿಯ ನಿರ್ವಹಣೆ ಹಾಗೂ ಸ್ಥಳೀಯ ಸಾಮಾಜಿಕ ಸಂಘಟನೆಯಲ್ಲಿ ವಹಿಸಿದ ಪ್ರಮುಖ ಪಾತ್ರವನ್ನು ಗುರುತಿಸಲಾಗಿದೆ. ಶಾಸನಗಳಲ್ಲಿ ದೊರೆಯುವ ಭೂದಾನ, ತೆರಿಗೆ, ಆಡಳಿತ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಿಸಿದ ಉಲ್ಲೇಖಗಳ ಮೂಲಕ ಅವರ ಆರ್ಥಿಕ ಪ್ರಭಾವವನ್ನು ಪರಿಶೀಲಿಸಲಾಗಿದೆ. ಕಾಲಕ್ರಮೇಣ ಗಾವುಂಡರ ಸ್ಥಾನಮಾನ ಮತ್ತು ಜವಾಬ್ದಾರಿಗಳಲ್ಲಿ ಉಂಟಾದ ಬದಲಾವಣೆಗಳನ್ನು ವಿವಿಧ ರಾಜಮನೆತನಗಳ ಆಳ್ವಿಕೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ತುಮಕೂರು ಜಿಲ್ಲೆಯ ಇತಿಹಾಸ, ಗ್ರಾಮೀಣ ಸಮಾಜ ಮತ್ತು ಸ್ಥಳೀಯ ಆಡಳಿತದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಶಾಸನೋಕ್ತ ಗಾವುಂಡರ ಅಧ್ಯಯನವು ಮಹತ್ವದ ಐತಿಹಾಸಿಕ ಆಕರವಾಗುತ್ತದೆ ಎಂಬುದನ್ನು ಅಧ್ಯಯನವು ಪ್ರತಿಪಾದಿಸುತ್ತದೆ.*

**ಮುಖ್ಯಪದಗಳು (Keywords):** *ಗಾವುಂಡರು, ತುಮಕೂರು ಜಿಲ್ಲೆ, ಶಾಸನಗಳು, ಗ್ರಾಮೀಣ ಆಡಳಿತ, ಚಾರಿತ್ರಿಕ ವಿಶ್ಲೇಷಣೆ*

## ಪೀಠಿಕೆ

ಕರ್ನಾಟಕವನ್ನಾಳಿದ ಬಹುತೇಕ ಆಳರಸರು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಹಲವು ವಿಭಾಗಗಳಲ್ಲಿ ವಿಂಗಡಿಸಿದ್ದರು. ಈ ವಿಭಾಗಗಳ ಆಡಳಿತವನ್ನು 'ಮಹಾಮಂಡಳೇಶ್ವರರು' ನೋಡಿಕೊಳ್ಳುತ್ತಿದ್ದರು.' ಆಳರಸರು ಅಥವಾ ಮಹಾಮಂಡಳೇಶ್ವರರು ದೊಡ್ಡ

*Please cite this article as:* ಜಗನ್ನಾಥ. ಬಿ. ಈ. ಮತ್ತು ಚಂದ್ರಕಾಂತ ಕೋಳಿಗುಡ್ಡೆ. (2026). ತುಮಕೂರು ಜಿಲ್ಲೆಯ ಶಾಸನೋಕ್ತ ಗಾವುಂಡರ ಉಗಮ ಮತ್ತು ವಿಕಾಸ: ಚಾರಿತ್ರಿಕ ವಿಶ್ಲೇಷಣೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 96–102

ದೊಡ್ಡ ವಿಭಾಗಗಳನ್ನು ಉಪವಿಭಾಗಗಳಲ್ಲಿ ವಿಂಗಡಿಸಿ. ಇವುಗಳ ಆಡಳಿತವನ್ನು 'ಮಹಾಸಾಮಂತ'ರಿಗೆ ಒಪ್ಪಿಸಿದ್ದರು. ಉಪವಿಭಾಗದ ಕೆಲವು ಗ್ರಾಮಗಳನ್ನೊಳಗೊಂಡ ಒಂದು ಸಮೂಹವನ್ನು 'ಪ್ರಭುಗಾವುಂಡರು' ಆಳುತ್ತಿದ್ದರು. ಪ್ರಭುಗಾವುಂಡರ ಅಧೀನದಲ್ಲಿ ಗ್ರಾಮಗಳ ಆಡಳಿತವನ್ನು 'ಗಾವುಂಡರು' ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಒಬ್ಬ ಗಾವುಂಡ ಇರುತ್ತಿದ್ದನು. ಕೆಲವು ಗ್ರಾಮಗಳಲ್ಲಿ ಹಲವು ಗಾವುಂಡರಿದ್ದು, ಇವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು. ಗಾವುಂಡತನ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಇವರು ಗ್ರಾಮದ ಆಡಳಿತ, ರಕ್ಷಣೆ, ತೆರಿಗೆ ಸಂಗ್ರಹಣೆ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಇದರೊಂದಿಗೆ ಗ್ರಾಮಕ್ಕೆ ಕೊಳ್ಳೆಯ ಬಾಧೆ ಮೊದಲಾದ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡುತ್ತಿದ್ದರು. ಕೆಲವು ಗಾವುಂಡರು ಏಕಭೋಗದಿಂದ ಆಳುತ್ತಿದ್ದರು. ವ್ಯಕ್ತಿಯು ತಾನು ಜೀವಂತವಾಗಿರುವವರೆಗೆ ಮಾತ್ರ ಆಡಳಿತ ನಡೆಸುವುದು ಏಕಭೋಗವಾಗಿದೆ. ಈ ಅಧಿಕಾರ ಆತನ ವಂಶಸ್ಥರಿಗೆ ಮುಂದುವರಿಯುವುದಿಲ್ಲ. ಮತ್ತೆ ಕೆಲವರು ತ್ರಿಭೋಗದಿಂದ ಆಳುತ್ತಿದ್ದರು. ಮೂರು ತಲೆಮಾರುಗಳವರೆಗೆ ಒಂದೇ ವಂಶಸ್ಥರು ಆಡಳಿತವನ್ನು ನಡೆಸುವುದು ತ್ರಿಭೋಗವಾಗಿದೆ.

ಕರ್ನಾಟಕದ ಮಧ್ಯಕಾಲೀನ ಆಡಳಿತ ವ್ಯವಸ್ಥೆಯಲ್ಲಿ ಗಾವುಂಡ ಎಂಬ ವ್ಯವಸ್ಥೆಯು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿತ್ತು. ಗ್ರಾಮವನ್ನು ಆಡಳಿತದ ಮೂಲ ಘಟಕವನ್ನಾಗಿ ಪರಿಗಣಿಸಿದ ರಾಜವಂಶಗಳು ಗ್ರಾಮಾಡಳಿತದ ಸುಸೂತ್ರ ನಿರ್ವಹಣೆಗಾಗಿ ಸ್ಥಳೀಯ ಅಧಿಕಾರಿಗಳನ್ನು ನೇಮಿಸುತ್ತಿದ್ದವು. ಅಂತಹ ಅಧಿಕಾರಿಗಳಲ್ಲಿ ಗಾವುಂಡರು ಅತ್ಯಂತ ಪ್ರಮುಖರಾಗಿದ್ದರು. ಅವರು ಗ್ರಾಮ ಮತ್ತು ನಾಡಿನ ಆಡಳಿತದ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುತ್ತಿದ್ದರು. ಗಾವುಂಡರು ಕೇವಲ ರಾಜಸತ್ತೆಯ ಪ್ರತಿನಿಧಿಗಳಾಗಿರದೆ, ಗ್ರಾಮಸ್ಥರ ಹಿತಾಸಕ್ತಿಗಳನ್ನು ಕಾಪಾಡುವ ಸ್ಥಳೀಯ ನಾಯಕರಾಗಿಯೂ ಗುರುತಿಸಲ್ಪಟ್ಟಿದ್ದರು. ಕರ್ನಾಟಕದ ಗಂಗರು, ನೊಳಂಬರು, ರಾಷ್ಟ್ರಕೂಟರು, ಪಶ್ಚಿಮ ಚಾಲುಕ್ಯರು, ಚೋಳರು, ಹೊಯ್ಸಳರು ಹಾಗೂ ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ ಗಾವುಂಡರ ಉಲ್ಲೇಖಗಳು ವ್ಯಾಪಕವಾಗಿ ಕಂಡುಬರುತ್ತವೆ.[1]

ತುಮಕೂರು ಜಿಲ್ಲೆಯು ಕರ್ನಾಟಕದ ಪ್ರಮುಖ ಶಾಸನ ಸಂಪದ್ಭರಿತ ಜಿಲ್ಲೆಗಳಲ್ಲಿ ಒಂದಾಗಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ದೊರೆತಿರುವ ಕನ್ನಡ ಮತ್ತು ಸಂಸ್ಕೃತ ಶಾಸನಗಳು ಮಧ್ಯಕಾಲೀನ ಗ್ರಾಮಾಡಳಿತದ ರಚನೆಯನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಮಹತ್ವದ ಪ್ರಾಥಮಿಕ ಆಕರಗಳಾಗಿವೆ. ಎಪಿಗ್ರಫಿಯ ಕರ್ನಾಟಿಕದ ತುಮಕೂರು ಜಿಲ್ಲೆಯ ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳು ಗಾವುಂಡರ ನೇಮಕಾತಿ, ಅಧಿಕಾರ, ಕರ್ತವ್ಯ, ಭೂದಾನ, ತೆರಿಗೆ, ದೇವಾಲಯ ನಿರ್ವಹಣೆ ಹಾಗೂ ಸಾಮಾಜಿಕ ಸ್ಥಾನಮಾನದ ಕುರಿತು ಅಮೂಲ್ಯ ಮಾಹಿತಿಯನ್ನು ಒದಗಿಸುತ್ತವೆ.[2]

"ಗಾವುಂಡ" ಎಂಬ ಪದವು ಕನ್ನಡ ಆಡಳಿತ ವ್ಯವಸ್ಥೆಯಲ್ಲಿ ವಿಶೇಷ ಅರ್ಥವನ್ನು ಹೊಂದಿದೆ. ಶಾಸನಗಳಲ್ಲಿ ಗಾವುಂಡ, ಗೌಡ, ಗವಂಡ, ಗವಂಡರು ಎಂಬ ವಿವಿಧ ರೂಪಗಳಲ್ಲಿ ಈ ಪದ ಬಳಕೆಯಾಗಿದೆ. ಸಾಮಾನ್ಯವಾಗಿ ಗ್ರಾಮದ ಮುಖ್ಯಸ್ಥ, ಭೂಸ್ವಾಮಿ, ತೆರಿಗೆ ಸಂಗ್ರಹಾಧಿಕಾರಿ, ನ್ಯಾಯನಿರ್ಣಾಯಕ ಹಾಗೂ ಗ್ರಾಮಸಭೆಯ ಪ್ರಮುಖ ಸದಸ್ಯನನ್ನು ಗಾವುಂಡನೆಂದು ಕರೆಯಲಾಗುತ್ತಿತ್ತು.[3]

ಕೆಲ ಶಾಸನಗಳಲ್ಲಿ ನಾಡಗಾವುಂಡ ಎಂಬ ಪದವಿಯೂ ಕಂಡುಬರುತ್ತದೆ. ಇದು ಗಾವುಂಡರು ಗ್ರಾಮಮಟ್ಟದ ಜೊತೆಗೆ ನಾಡುಮಟ್ಟದ ಆಡಳಿತದಲ್ಲಿಯೂ ಪ್ರಭಾವಿ ಸ್ಥಾನವನ್ನು ಹೊಂದಿದ್ದರೆಂಬುದನ್ನು ಸೂಚಿಸುತ್ತದೆ.[4]

ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಗಾವುಂಡರು ಆಡಳಿತಾತ್ಮಕ ಅಧಿಕಾರಿಗಳಾಗಿ ಮಾತ್ರವಲ್ಲದೆ, ಸಮಾಜದ ಆರ್ಥಿಕ ಮತ್ತು ಧಾರ್ಮಿಕ ಜೀವನದ ಪ್ರಮುಖ ಆಶ್ರಯದಾತರಾಗಿಯೂ ಕಾಣಿಸಿಕೊಳ್ಳುತ್ತಾರೆ. ದೇವಾಲಯಗಳಿಗೆ ಭೂದಾನ, ದೀಪದಾನ, ಕೆರೆಗಳ ನಿರ್ಮಾಣ, ನೀರಾವರಿ ವ್ಯವಸ್ಥೆ, ಗ್ರಾಮದ ಗಡಿ ನಿರ್ಣಯ, ತೆರಿಗೆ ವಿನಾಯಿತಿ ಹಾಗೂ ಸಾರ್ವಜನಿಕ ಕಾಮಗಾರಿಗಳಲ್ಲಿ ಗಾವುಂಡರು ಮಹತ್ವದ ಪಾತ್ರ ವಹಿಸಿರುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.[5] ಇದರಿಂದ ಗಾವುಂಡರು ಗ್ರಾಮೀಣ ಸಮಾಜದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಗಾವುಂಡರ ನೇಮಕಾತಿ ವ್ಯವಸ್ಥೆಯು ವಿವಿಧ ರಾಜವಂಶಗಳಲ್ಲಿ ವಿಭಿನ್ನ ಸ್ವರೂಪವನ್ನು ಹೊಂದಿತ್ತು. ಗಂಗರ ಹಾಗೂ ನೊಳಂಬರ ಕಾಲದಲ್ಲಿ ಸ್ಥಳೀಯ ಪ್ರಭಾವಿ ಕುಟುಂಬಗಳಿಂದ ಗಾವುಂಡರನ್ನು ನೇಮಿಸುವ ಪದ್ಧತಿ ಕಂಡುಬಂದರೆ, ರಾಷ್ಟ್ರಕೂಟರು ಹಾಗೂ ಪಶ್ಚಿಮ ಚಾಲುಕ್ಯರ ಕಾಲದಲ್ಲಿ ರಾಜಾನುಮೋದನೆಯೊಂದಿಗೆ ಸ್ಥಳೀಯ ನಾಯಕರು ಗಾವುಂಡ ಹುದ್ದೆಯನ್ನು ನಿರ್ವಹಿಸುತ್ತಿದ್ದರು. ಹೊಯ್ಸಳರು ಹಾಗೂ ವಿಜಯನಗರ ಅರಸರ ಕಾಲದಲ್ಲಿ ವಂಶಪಾರಂಪರ್ಯ ಪದ್ಧತಿ ಮತ್ತಷ್ಟು ಬಲಗೊಂಡಿತು.[6]

ಗಾವುಂಡರ ಸಾಮಾಜಿಕ ಸ್ಥಾನಮಾನವು ಗ್ರಾಮೀಣ ಸಮಾಜದಲ್ಲಿ ಅತ್ಯಂತ ಉನ್ನತವಾಗಿತ್ತು. ಅವರು ಸಾಮಾನ್ಯವಾಗಿ ದೊಡ್ಡ ಭೂಸ್ವಾಮಿಗಳಾಗಿದ್ದು, ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಿ ಪರಿಗಣಿಸಲ್ಪಟ್ಟಿದ್ದರು. ಗ್ರಾಮಸಭೆಗಳಲ್ಲಿ ಅವರ ಅಭಿಪ್ರಾಯಕ್ಕೆ ವಿಶೇಷ ಮಹತ್ವವಿತ್ತು. ದೇವಾಲಯಗಳ ಉತ್ಸವಗಳು, ಧಾರ್ಮಿಕ ದತ್ತಿಗಳು, ನೀರಾವರಿ ಕಾಮಗಾರಿಗಳು ಹಾಗೂ ಸಾರ್ವಜನಿಕ ನಿರ್ಧಾರಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಶಾಸನಗಳಲ್ಲಿ ಅವರ ಹೆಸರನ್ನು ಗೌರವಪೂರ್ವಕವಾಗಿ ದಾಖಲಿಸಿರುವುದು ಅವರ ಸಾಮಾಜಿಕ ಪ್ರತಿಷ್ಠೆಯನ್ನು ಪ್ರತಿಬಿಂಬಿಸುತ್ತದೆ.[7] ತುಮಕೂರು ಜಿಲ್ಲೆಯ ಕೆಲವು ಶಾಸನಗಳಲ್ಲಿ ಮಹಿಳಾ ಗಾವುಂಡರ ಉಲ್ಲೇಖಗಳೂ ದೊರೆಯುತ್ತವೆ. ಅವರು ದೇವಾಲಯಗಳಿಗೆ ಭೂದಾನ ನೀಡಿರುವುದು, ದತ್ತಿಗಳನ್ನು ಸ್ಥಾಪಿಸಿರುವುದು ಹಾಗೂ ಆಡಳಿತಾತ್ಮಕ ಕಾರ್ಯಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಇದರಿಂದ ಮಧ್ಯಕಾಲೀನ ಕರ್ನಾಟಕದಲ್ಲಿ ಮಹಿಳೆಯರೂ ಸ್ಥಳೀಯ ಆಡಳಿತದಲ್ಲಿ ಗಮನಾರ್ಹ ಪಾತ್ರ ವಹಿಸಿದ್ದರೆಂಬುದು ತಿಳಿದುಬರುತ್ತದೆ.[8]

ಆದ್ದರಿಂದ ಈ ಅಧ್ಯಾಯದಲ್ಲಿ ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಗಾವುಂಡರ ನೇಮಕಾತಿ ವಿಧಾನ, ವಂಶಪಾರಂಪರ್ಯ, ರಾಜಾನುಮೋದನೆ, ಗ್ರಾಮಸಭೆಯೊಂದಿಗಿನ ಸಂಬಂಧ, ಸಾಮಾಜಿಕ ಸ್ಥಾನಮಾನ ಹಾಗೂ ವಿವಿಧ ರಾಜವಂಶಗಳ ಕಾಲದಲ್ಲಿ ಅವರ ಸ್ಥಾನಮಾನದ ಬದಲಾವಣೆಗಳನ್ನು ಶಾಸನಾಧಾರಿತವಾಗಿ ವಿಶ್ಲೇಷಿಸಲಾಗುತ್ತದೆ. ಈ ಅಧ್ಯಯನವು ಗಾವುಂಡ ವ್ಯವಸ್ಥೆಯ

ನೈಜ ಐತಿಹಾಸಿಕ ಸ್ವರೂಪವನ್ನು ಪುನರ್‌ನಿರ್ಮಾಣ ಮಾಡುವುದರ ಜೊತೆಗೆ ಕರ್ನಾಟಕದ ಮಧ್ಯಕಾಲೀನ ಗ್ರಾಮಾಡಳಿತದ ಇತಿಹಾಸಕ್ಕೆ ಹೊಸ ಬೆಳಕು ಚೆಲ್ಲುವ ಪ್ರಯತ್ನವಾಗಿದೆ.

**ಗಾವುಂಡ ಪದದ ಅರ್ಥ, ಉಗಮ ಮತ್ತು ವಿಕಾಸ**

ಕರ್ನಾಟಕದ ಸಾಮಾಜಿಕ ಹಾಗೂ ಆಡಳಿತಾತ್ಮಕ ಇತಿಹಾಸದಲ್ಲಿ "ಗಾವುಂಡ" ಎಂಬ ಪದವು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಾಸನಗಳಲ್ಲಿ ಈ ಪದವು ಆಡಳಿತ, ಭೂಸ್ವಾಮ್ಯ, ಕಂದಾಯ ವ್ಯವಸ್ಥೆ ಮತ್ತು ಗ್ರಾಮೀಣ ನಾಯಕತ್ವದೊಂದಿಗೆ ನಿಕಟವಾಗಿ ಸಂಬಂಧ ಹೊಂದಿದೆ. ಗಾವುಂಡರು ಕೇವಲ ಗ್ರಾಮಮುಖ್ಯಸ್ಥರಲ್ಲ; ಅವರು ಸ್ಥಳೀಯ ಆಡಳಿತದ ಪ್ರಮುಖ ಪ್ರತಿನಿಧಿಗಳು, ರಾಜಸತ್ತೆಯ ಮಧ್ಯವರ್ತಿಗಳು ಮತ್ತು ಗ್ರಾಮೀಣ ಸಮಾಜದ ನಾಯಕರು ಆಗಿದ್ದರು. ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಈ ಪದವು ವಿವಿಧ ರೂಪಗಳಲ್ಲಿ ಕಂಡುಬರುವುದರಿಂದ, ಅದರ ಅರ್ಥ, ಉಗಮ ಮತ್ತು ಕಾಲಾನುಕ್ರಮದಲ್ಲಿ ಉಂಟಾದ ವಿಕಾಸವನ್ನು ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕವಾಗಿದೆ.[9]

**ಗಾವುಂಡ ಪದದ ಅರ್ಥ**

"ಗಾವುಂಡ" ಎಂಬ ಪದವು ಕನ್ನಡ ಶಾಸನಗಳಲ್ಲಿ ಗಾವುಂಡ, ಗೌಡ, ಗವಂಡ, ಗವಂಡರು (Gavunda, Gauda, Gavuṇḍa) ಎಂಬ ರೂಪಗಳಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಈ ಪದವು ಗ್ರಾಮದ ಮುಖ್ಯಸ್ಥ, ಭೂಸ್ವಾಮಿ, ಕಂದಾಯಾಧಿಕಾರಿ, ಗ್ರಾಮಸಭೆಯ ಪ್ರಮುಖ ಸದಸ್ಯ ಅಥವಾ ರಾಜನ ಸ್ಥಳೀಯ ಪ್ರತಿನಿಧಿ ಎಂಬ ಅರ್ಥದಲ್ಲಿ ಬಳಕೆಯಾಗಿದೆ.[10]

ಕೆಲವು ವಿದ್ವಾಂಸರ ಅಭಿಪ್ರಾಯದಂತೆ "ಗಾವುಂಡ" ಎಂಬುದು ಮೂಲತಃ ಗ್ರಾಮದ ರಕ್ಷಕ ಅಥವಾ ಗ್ರಾಮದ ನಾಯಕ ಎಂಬ ಅರ್ಥವನ್ನು ಹೊಂದಿದ್ದು, ನಂತರ ಅದು ಆಡಳಿತಾತ್ಮಕ ಹುದ್ದೆಯಾಗಿ ರೂಪುಗೊಂಡಿತು. ಮತ್ತೊಂದು ಅಭಿಪ್ರಾಯದ ಪ್ರಕಾರ, "ಗಾವುಂಡ" ಎಂಬುದು ಗಾವು (ಗ್ರಾಮ) ಎಂಬ ಪದದಿಂದ ಉತ್ಪತ್ತಿಯಾಗಿ, "ಗ್ರಾಮದ ಅಧಿಪತಿ" ಎಂಬ ಅರ್ಥವನ್ನು ಪಡೆದುಕೊಂಡಿತು.[11]

ಶಾಸನಗಳಲ್ಲಿ "ನಾಡಗಾವುಂಡ", "ಪ್ರಭು ಗಾವುಂಡ", "ಮಹಾಗಾವುಂಡ" ಮುಂತಾದ ಪದಪ್ರಯೋಗಗಳು ಕಂಡುಬರುತ್ತವೆ. ಇವು ಗಾವುಂಡರ ಅಧಿಕಾರದ ವ್ಯಾಪ್ತಿ ಮತ್ತು ಸ್ಥಾನಮಾನವು ಎಲ್ಲೆಡೆ ಒಂದೇ ರೀತಿಯಾಗಿರಲಿಲ್ಲ ಎಂಬುದನ್ನು ಸೂಚಿಸುತ್ತವೆ.

**ಗಾವುಂಡ ಪದದ ಉಗಮ**

ಗಾವುಂಡ ಪದದ ಉಗಮದ ಕುರಿತು ಇತಿಹಾಸಕಾರರಲ್ಲಿ ಕೆಲವು ಭಿನ್ನಾಭಿಪ್ರಾಯಗಳಿವೆ. ಆದಾಗ್ಯೂ ಈ ಕುರಿತು ಕೆಲವು ವಿದ್ವಾಂಸರು ನೀಡಿರುವ ಅಭಿಪ್ರಾಯಗಳನ್ನು ಗಮನಿಸುವುದಾದರೆ,

ಡಿ. ಸಿ. ಸರ್ಕಾರ್ ಅವರ ಅಭಿಪ್ರಾಯದಂತೆ, "ಗಾವುಂಡ" ಎಂಬುದು ದಕ್ಷಿಣ ಭಾರತದ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಬೆಳವಣಿಗೆಯಾದ ಪದವಾಗಿದ್ದು, ಗ್ರಾಮದ ಪ್ರಮುಖ ಭೂಸ್ವಾಮಿ ಮತ್ತು ಆಡಳಿತಾಧಿಕಾರಿಯನ್ನು ಸೂಚಿಸುತ್ತದೆ.[12]

ಕೆ. ವಿ. ರಮೇಶ್ ಅವರ ಪ್ರಕಾರ, ಕ್ರಿ.ಶ. 8–9ನೇ ಶತಮಾನದಿಂದ ಕರ್ನಾಟಕದ ಶಾಸನಗಳಲ್ಲಿ ಈ ಪದವು ಹೆಚ್ಚಾಗಿ ಬಳಕೆಗೆ ಬಂದಿದೆ. ಗಂಗರು ಮತ್ತು ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ ಗಾವುಂಡರು ಭೂಸ್ವಾಮಿಗಳು ಹಾಗೂ ಆಡಳಿತದ ಮಧ್ಯವರ್ತಿಗಳಾಗಿ ಉಲ್ಲೇಖಿಸಲ್ಪಟ್ಟಿದ್ದಾರೆ.[13]

ಬರ್ಟನ್ ಸ್ಟೀನ್ ಅವರ ಅಭಿಪ್ರಾಯದಲ್ಲಿ, ಮಧ್ಯಕಾಲೀನ ದಕ್ಷಿಣ ಭಾರತದ "Segmentary State" ಮಾದರಿಯಲ್ಲಿ ಗಾವುಂಡರು ರಾಜಸತ್ತೆ ಮತ್ತು ಗ್ರಾಮಸಮಾಜದ ನಡುವಿನ ಪ್ರಮುಖ ಸಂಪರ್ಕ ಕೊಂಡಿಯಾಗಿದ್ದರು. ಸ್ಥಳೀಯ ಆಡಳಿತದ ಯಶಸ್ಸು ಬಹುಮಟ್ಟಿಗೆ ಗಾವುಂಡರ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿತ್ತು.[14]

**ಶಾಸನಗಳಲ್ಲಿ ಗಾವುಂಡ ಪದದ ಬಳಕೆ**

ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಗಾವುಂಡ ಪದವು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ವಿಶೇಷವಾಗಿ ಗಂಗ, ನೊಳಂಬ, ರಾಷ್ಟ್ರಕೂಟ, ಪಶ್ಚಿಮ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲದ ಶಾಸನಗಳಲ್ಲಿ ಈ ಪದದ ಬಳಕೆ ವ್ಯಾಪಕವಾಗಿದೆ. ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಗಾವುಂಡರು ಈ ಮುಂದಿನ ಸಂದರ್ಭಗಳಲ್ಲಿ ಉಲ್ಲೇಖಿತ ರಾಗಿದ್ದಾರೆ. ಭೂದಾನ ಮತ್ತು ದೇವದಾನ, ತೆರಿಗೆ ಸಂಗ್ರಹಣೆ, ಗ್ರಾಮದ ಗಡಿ ನಿರ್ಣಯ, ದೇವಾಲಯ ನಿರ್ವಹಣೆ, ಕೆರೆ ನಿರ್ಮಾಣ, ಗ್ರಾಮಸಭೆಯ ನಿರ್ಣಯಗಳು, ನ್ಯಾಯ ನಿರ್ವಹಣೆ ಇವುಗಳಿಂದ ಗಾವುಂಡರು ಗ್ರಾಮಾಡಳಿತದ ಎಲ್ಲ ಪ್ರಮುಖ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.[15]

**ಗಾವುಂಡ ವ್ಯವಸ್ಥೆಯ ವಿಕಾಸ**

ಗಾವುಂಡ ವ್ಯವಸ್ಥೆಯು ಕಾಲಕ್ರಮೇಣ ಮಧ್ಯಕರ್ನಾಟಕದಿಂದ ವಸಾಹತು ಕಾಲಘಟ್ಟದವರೆಗಿನ ವಿವಿಧ ರಾಜಮನೆತನಗಳ ಆಡಳಿತಾವಧಿಯಲ್ಲಿ ತನ್ನದೆ ಸ್ವರೂಪದಲ್ಲಿ ವಿಕಸನಗೊಂಡಿತು.

1. **ಗಂಗರ ಕಾಲ (4–10ನೇ ಶತಮಾನ):** ಈ ಅವಧಿಯಲ್ಲಿ ಗಾವುಂಡರು ಪ್ರಮುಖ ಭೂಸ್ವಾಮಿಗಳಾಗಿದ್ದು, ಗ್ರಾಮಾಡಳಿತದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದರು. ರಾಜನ ಪರವಾಗಿ ತೆರಿಗೆ ಸಂಗ್ರಹಣೆ ಮತ್ತು ಭೂನಿರ್ವಹಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.
2. **ನೊಳಂಬ ಮತ್ತು ರಾಷ್ಟ್ರಕೂಟರ ಕಾಲ:** ಈ ಅವಧಿಯಲ್ಲಿ ಗಾವುಂಡರ ಆಡಳಿತಾತ್ಮಕ ಅಧಿಕಾರ ಮತ್ತಷ್ಟು ವಿಸ್ತರಿಸಿತು. ಗ್ರಾಮಸಭೆಯ ನಿರ್ಣಯಗಳಲ್ಲಿ ಅವರು ಪ್ರಮುಖ ಪಾತ್ರವಹಿಸುತ್ತಿದ್ದರು. ದೇವಾಲಯಗಳ ನಿರ್ವಹಣೆ ಮತ್ತು ಭೂದಾನಗಳ ಅನುಷ್ಠಾನದಲ್ಲಿಯೂ ಅವರು ಪ್ರಮುಖರಾಗಿದ್ದರು.
3. **ಪಶ್ಚಿಮ ಚಾಲುಕ್ಯ ಮತ್ತು ಹೊಯ್ಸಳರ ಕಾಲ:** ಈ ಕಾಲದಲ್ಲಿ ಗಾವುಂಡ ಹುದ್ದೆ ಹೆಚ್ಚು ಸ್ಥಿರ ಆಡಳಿತಾತ್ಮಕ ವ್ಯವಸ್ಥೆಯಾಗಿ ರೂಪುಗೊಂಡಿತು. **"ನಾಡಗಾವುಂಡ"** ಎಂಬ ಉನ್ನತ ಹುದ್ದೆಗಳ ಉಲ್ಲೇಖಗಳು ಇದೇ ಕಾಲದ ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಂಶಪಾರಂಪರ್ಯ ಪದ್ಧತಿಯೂ ಬಲವತ್ತಾಯಿತು.[16]

**4. ವಿಜಯನಗರ ಕಾಲ:** ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಗಾವುಂಡರು ಗ್ರಾಮಾಡಳಿತದ ಪ್ರಮುಖ ಆಧಾರವಾಗಿದ್ದರು. ಕಂದಾಯ, ನ್ಯಾಯಾಂಗ, ನೀರಾವರಿ, ದೇವಾಲಯ ಆಡಳಿತ ಮತ್ತು ಸಾರ್ವಜನಿಕ ಕಾಮಗಾರಿಗಳ ಮೇಲ್ವಿಚಾರಣೆಯಲ್ಲಿ ಅವರು ಮಹತ್ವದ ಪಾತ್ರವಹಿಸಿದರು.

**5. ಮೈಸೂರು ಮತ್ತು ಬ್ರಿಟಿಷ್ ಕಾಲ:** ಮೈಸೂರು ಒಡೆಯರ ಕಾಲದಲ್ಲಿ ಗಾವುಂಡರ ಸ್ಥಾನಮಾನ ಮುಂದುವರಿದರೂ, ಬ್ರಿಟಿಷರ ಕಂದಾಯ ಸುಧಾರಣೆಗಳ ನಂತರ ಅವರ ಸಾಂಪ್ರದಾಯಿಕ ಅಧಿಕಾರ ಕ್ರಮೇಣ ಕುಗ್ಗಿತು. ಆದಾಗ್ಯೂ, ಕೆಲವು ಪ್ರದೇಶಗಳಲ್ಲಿ **"ಗೌಡ"** ಎಂಬ ಗ್ರಾಮನಾಯಕನ ಸ್ಥಾನವು ಸಾಮಾಜಿಕವಾಗಿ ದೀರ್ಘಕಾಲ ಉಳಿಯಿತು.[17]

**ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಗಾವುಂಡರ ವಿಶೇಷತೆ**

ತುಮಕೂರು ಜಿಲ್ಲೆಯ ಶಾಸನಗಳು ಗಾವುಂಡರು ಕೇವಲ ಆಡಳಿತಾಧಿಕಾರಿಗಳಲ್ಲದೆ, ಸಮಾಜದ ಪ್ರಮುಖ ದಾನಿಗಳೂ ಆಗಿದ್ದರೆಂಬುದನ್ನು ತೋರಿಸುತ್ತವೆ. ದೇವಾಲಯಗಳಿಗೆ ಭೂದಾನ, ದೀಪದಾನ, ಕೆರೆಗಳ ನಿರ್ಮಾಣ, ಕಾಲುವೆಗಳ ದುರಸ್ತಿ ಹಾಗೂ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಲ್ಲಿ ಅವರ ಹೆಸರುಗಳು ನಿರಂತರವಾಗಿ ಕಂಡುಬರುತ್ತವೆ. ಕೆಲವು ಶಾಸನಗಳಲ್ಲಿ ಮಹಿಳಾ ಗಾವುಂಡರ ಉಲ್ಲೇಖವೂ ದೊರೆಯುವುದು ಗಾವುಂಡ ವ್ಯವಸ್ಥೆಯ ವ್ಯಾಪಕತೆಯನ್ನು ಸೂಚಿಸುತ್ತದೆ.

ಗಾವುಂಡ ಪದದ ಅರ್ಥ, ಉಗಮ ಮತ್ತು ವಿಕಾಸವನ್ನು ಪರಿಶೀಲಿಸಿದಾಗ, ಅದು ಕೇವಲ ಒಂದು ಹುದ್ದೆಯಲ್ಲದೆ ಕರ್ನಾಟಕದ ಗ್ರಾಮೀಣ ಆಡಳಿತದ ಮೂಲಭೂತ ವ್ಯವಸ್ಥೆಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಗಂಗರ ಕಾಲದಿಂದ ವಿಜಯನಗರ ಕಾಲದವರೆಗೆ ಗಾವುಂಡರು ಗ್ರಾಮಾಡಳಿತದ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸಿದ್ದು, ಕಂದಾಯ, ನ್ಯಾಯಾಂಗ, ಭೂನಿರ್ವಹಣೆ, ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಗಳಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ತುಮಕೂರು ಜಿಲ್ಲೆಯ ಶಾಸನಗಳು ಈ ವ್ಯವಸ್ಥೆಯ ಇತಿಹಾಸವನ್ನು ಪುನರ್‌ನಿರ್ಮಿಸಲು ಅತ್ಯಂತ ವಿಶ್ವಾಸಾರ್ಹ ಆಕರಗಳಾಗಿವೆ.

**ಅಡಿಟಿಪ್ಪಣಿಗಳು**


1. ಬಿ. ಲೆವಿಸ್ ರೈಸ್ (ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ. XII: ತುಮಕೂರು ಜಿಲ್ಲೆಯ ಶಾಸನಗಳು, ಮೈಸೂರು ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು, 1904.
2. ಡಿ. ಸಿ. ಸರ್ಕಾರ್, ಇಂಡಿಯನ್ ಎಪಿಗ್ರಫಿ, ಮೋತಿಲಾಲ್ ಬನಾರ್ಸಿದಾಸ್, ನವದೆಹಲಿ, 1965, ಪು. 312–318; 330–338.
3. ಕೆ.ವಿ. ರಮೇಶ್, ಇಂಡಿಯನ್ ಎಪಿಗ್ರಫಿ, ಸಂದೀಪ್ ಪ್ರಕಾಶನ, ನವದೆಹಲಿ, 1984, ಪು. 1–24, 156–160.
4. ನೊಬೊರು ಕರಾಶಿಮಾ, ದಕ್ಷಿಣ ಭಾರತೀಯ ಇತಿಹಾಸ ಮತ್ತು ಸಮಾಜ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ, ದೆಹಲಿ, 1984, ಪು. 120–138.

5. ಬರ್ಟನ್ ಸ್ಟೈನ್, ಪೆಸೆಂಟ್ ಸ್ಟೇಟ್ ಅಂಡ್ ಸೊಸೈಟಿ ಇನ್ ಮೆಡೀವಲ್ ಸೌತ್ ಇಂಡಿಯಾ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ದೆಹಲಿ, 1980, ಪು. 64–108.
6. ಕೆ. ಎ. ನೀಲಕಂಠ ಶಾಸ್ತ್ರಿ, ಎ ಹಿಸ್ಟರಿ ಆಫ್ ಸೌತ್ ಇಂಡಿಯಾ, ಪರಿಷ್ಕೃತ ಆವೃತ್ತಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಪು. 465–480.
7. ಬಿ. ಆರ್. ಗೋಪಾಲ್, ದಿ ಪೊಲಿಟಿಕಲ್ ಅಂಡ್ ಕಲ್ಚರಲ್ ಹಿಸ್ಟರಿ ಆಫ್ ಕರ್ನಾಟಕ, ಬೆಂಗಳೂರು.
8. ಎಸ್. ಸೆಟ್ಟರ್, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಎಪಿಗ್ರಫಿ, ಧಾರವಾಡ.
9. ಬಿ. ಲೂಯಿಸ್ ರೈಸ್ (ಸಂ.), ಎಪಿಗ್ರಾಫಿಯಾ ಕಾರ್ನಾಟಿಕಾ, ಸಂಪುಟ XII, ಇನ್‌ಸ್ಕ್ರಿಪ್ಷನ್ಸ್ ಇನ್ ದಿ ತುಮಕೂರು ಡಿಸ್ಟ್ರಿಕ್ಟ್, ಮೈಸೂರು ಗವರ್ನಮೆಂಟ್ ಪ್ರೆಸ್, 1904.
10. ಡಿ. ಸಿ. ಸಿರ್ಕಾರ್, ಇಂಡಿಯನ್ ಎಪಿಗ್ರಫಿ, ಮೋತಿಲಾಲ್ ಬನಾರಸಿದಾಸ್, ನವದೆಹಲಿ, 1965, ಪುಟಗಳು 312–318.
11. ಕೆ. ವಿ. ರಮೇಶ್, ಭಾರತೀಯ ಶಿಲಾಶಾಸನ, ಸಂದೀಪ್ ಪ್ರಕಾಶನ, ನವದೆಹಲಿ, 1984, ಪುಟಗಳು 156–160.
12. ಡಿ. ಸಿ. ಸಿರ್ಕಾರ್, ಭಾರತೀಯ ಶಿಲಾಶಾಸನ, ಪುಟಗಳು 314–316.
13. ಕೆ. ವಿ. ರಮೇಶ್, ಭಾರತೀಯ ಶಿಲಾಶಾಸನ, ಪುಟಗಳು 158–160.
14. ಬರ್ಟನ್ ಸ್ಟೈನ್, ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ರೈತ ರಾಜ್ಯ ಮತ್ತು ಸಮಾಜ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ, 1980, ಪುಟಗಳು 64–89.
15. ಬಿ. ಲೂಯಿಸ್ ರೈಸ್ (ಸಂ.), ಎಪಿಗ್ರಾಫಿಯಾ ಕಾರ್ನಾಟಿಕಾ, ಸಂಪುಟಗಳು XII ಮತ್ತು XVI, ತುಮಕೂರು ಶಾಸನಗಳು.
16. ಎಸ್. ಸೆಟ್ಟರ್, ಕರ್ನಾಟಕ ಇತಿಹಾಸ ಮತ್ತು ಶಿಲಾಶಾಸನಗಳಲ್ಲಿ ಅಧ್ಯಯನಗಳು, ಧಾರವಾಡ, ಪುಟಗಳು 87–102.
17. ನೊಬೊರು ಕರಶಿಮಾ, ಸೌತ್ ಇಂಡಿಯನ್ ಹಿಸ್ಟರಿ ಅಂಡ್ ಸೊಸೈಟಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1984, ಪುಟಗಳು 120–138.